INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -1, May-June, 2022,
PageNo,09-19
Peer Reviewed Journal, Referred Journal

# ಮಾದೇಶ್ವರ ಪರಂಪರೆಯ ಪರಿಶೆಗಳಲ್ಲಿ ವಿವಿಧ ಸಮುದಾಯಗಳ ಸಹಭಾಗಿತ್ವ

**ಶಿವಕುಮಾರ್ ಎಸ್.**[1]

ಮನುಷ್ಯನ ಪರಂಪರಾಗತ ನಂಬಿಕೆಗಳಿಗೆ ಕೊಡಲಿಪೆಟ್ಟು ಬೀಳುತ್ತಿರುವ ಇಂದಿನ ದಿನಮಾನಗಳಲ್ಲಿ ಮಾದೇಶ್ವರನ ಆರಾಧನಾ ಕ್ರಮ, ಆಚರಣೆ, ಸಂಪ್ರದಾಯ, ಪರಿಶೆಗಳು ಮಾದೇಶ್ವರನ ಬೆಟ್ಟದಲ್ಲಿ ಅರ್ಥಪೂರ್ಣವಾಗಿ ನಡೆದುಕೊಂಡು ಬರುತ್ತಿವೆ. ಮಾದೇಶ್ವರನು ಚರಿತ್ರೆಯಲ್ಲಿ ಪವಾಡ ಪುರುಷನಾಗಿ ಕತ್ತಲ ರಾಜ್ಯ ಎಂಬ ನಾಡಿನಲ್ಲಿ ನೆಲೆಸಿ ಹಲವು ಜಾತಿ ಸಮುದಾಯಗಳಿಗೆ ನಾಯಕನಾಗಿ ಕರ್ನಾಟಕ ಸಂಸ್ಕೃತಿ ಚರಿತ್ರೆಯಲ್ಲಿ ಬಹುದೊಡ್ಡದಾಗಿ ನಮ್ಮ ಕಣ್ಮುಂದೆ ಬರುತ್ತಾರೆ.ನಮ್ಮ ದೇಶದುದ್ದಕ್ಕೂ ನೂರಾರು ಜಾತಿ–ಉಪಜಾತಿಗಳಿವೆ. ಹಬ್ಬ, ಆಚರಣೆ, ಸಂಪ್ರದಾಯ, ನಂಬಿಕೆ.ಆಚಾರ–ವಿಚಾರ ಆಲೋಚನೆ ಈ ಮೊದಲಾದವುಗಳಲ್ಲಿ ಪರಸ್ಪರ ಜಾತಿ ಸಮುದಾಯಗಳ ನಡುವೆ ಸಾಮ್ಯತೆ ಇರುವುದನ್ನು ಮಾದೇಶ್ವರ ಬೆಟ್ಟದಲ್ಲಿ ಜರುಗುವ ಪರಿಶೆಗಳಲ್ಲಿ ಕಾಣಬಹುದು.

ವರ್ಷದ ಬೇರಾವ ದಿನದಲ್ಲಿಯೂ ಮೇಲ್ವರ್ಗದವರ ಸನಿಹ ಬರಲು ಅವಕಾಶವಿಲ್ಲದಿದ್ದರೂ ಜಾತ್ರೆಯ ದಿನ ವಿಶೇಷ ಬರಬಹುದಾಗಿದೆ.ಬೇರೆ ಬೇರೆ ಸಂಸ್ಕೃತಿಯನ್ನು ರೂಪಿಸಿಕೊಂಡು ಸಾಮಾಜಿಕ ಗುಂಪುಗಳ ಒಟ್ಟಾಗಿ ಕಲೆತು ಪರಸ್ಪರ ಸಂಬಂಧಗಳನ್ನು ದೃಡಪಡಿಸಿಕೊಳ್ಳುವುದರ ಜೊತೆಗೆ ಹೊಂದಾಣಿಕೆಯನ್ನು ಬೆಳೆಸಿಕೊಳ್ಳಲು ಪರಿಶೆ ಸಹಾಯಕವಾಗುತ್ತದೆ.ಈ ಐಕ್ಯ ಭಾವನೆ ಕೇವಲ ರಕ್ತ ಸಂಬಂಧಗಳಿಂದಷ್ಟೇ ಸಾಧಿತವಾಗದೆ ಬಹುಭಾಗ ಸಾಮುದಾಯಿಕ ಆಸಕ್ತಿ ಹಾಗೂ ಪರಂಪರಾಗತ ನಡವಳಿಕೆಗಳಿಂದ ಸಾಧಿತವಾಗುತ್ತದೆಂದು.

ಪರಿಶೆಗಳು ಪ್ರಾದೇಶಿಕ ವೈವಿಧ್ಯತೆಯಿಂದ ಕೂಡಿದ್ದರೂ ಆಚರಣೆಯ ಆಶಯಗಳು ಮುಖ್ಯವಾಗಿ ಜನಸಮೂಹದ ಕಲ್ಯಾಣಕ್ಕಾಗಿ ಮತ್ತು ಸಾಂಸ್ಕೃತಿಕ, ವಾಣಿಜ್ಯ ವಹಿವಾಟುಗಳ ಕೊಂಡುಕೊಳ್ಳುವಿಕೆಯ ಸಂಭ್ರಮದಲ್ಲಿ ಕೂಡುವ ವೇದಿಕೆಗಳಾಗಿರುತ್ತವೆ. ಜನಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು, ವೈಯಕ್ತಿಕ ಭಾವನೆಗಳನ್ನು ಹಂಚಿಕೊಳ್ಳಲೂ ಸಹ ಪರಿಶೆಯು ವಿಶೇಷ ವೇದಿಕೆಯಾಗಿ ನಿರ್ಮಾಣಗೊಳ್ಳುವುದು. ಇದು ಸಮಾಜದ ಒಗ್ಗೂಡುವಿಕೆ ಹೆಚ್ಚು ಅನುಕೂಲಕರವಾಗಿದೆ.

---

[1]. ಸಂಶೋಧಕರು. ಜಾನಪದ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು

ಮಾದೇಶ್ವರನ ಪರಂಪರೆಯ ಉದಯಸಲಿಕ್ಕೆ ಕಾರಣವಾದ ಅಂಶಗಳೇ ಇಲ್ಲೂ ದಟ್ಟವಾಗಿ ಕಾಣಸಿಗುತ್ತವೆ.ವೆಂಕಟೇಶ ಇಂದ್ವಾಡಿ ಅವರು ಉಲ್ಲೇಖಿಸಿರುವಂತೆ 12ನೇಶತಮಾನದ ಶರಣರು "ಕುಲ ಏಳು ಹದಿನೆಂಟು ಜಾತಿಗಳು ಒಂದೇ" ಎಂದು ಸಾರಿದ್ದ ಆಶಯ ವೀರಶೈವ ಧರ್ಮದ ಸಾಂಸ್ಥಿಕ ಪ್ರಕ್ರಿಯೆಯಿಂದ ಒಡೆದು ಹೋಯಿತು. ಇಂತಹ ಸಂದರ್ಭದಲ್ಲಿ ವೀರಶೈವ ಧರ್ಮದ ಅಚಾರ ಮಾರ್ಗದಿಂದ ಅನೇಕ ಸಮುದಾಯಗಳು ಹೊರಗುಳಿದವು. ಹೀಗೆ ಹೊರಗುಳಿದ ಸಮುದಾಯಗಳಲ್ಲಿ ಕೆಳವರ್ಗದ ಕಾಯಕ ಜೀವಿಗಳ ಸಂಖ್ಯೆ ಹೆಚ್ಚಿದ್ದವು.ಇಂತಹ ಸಂದರ್ಭದಲ್ಲಿ ಕೆಳವರ್ಗದ ಸಾಂಸ್ಕೃತಿಕ ನಾಯಕರಾದ ಮಾದೇಶ್ವರ ಮತ್ತು ಮಂಟೇಸ್ವಾಮಿ ಈ ತಳ ಸಮುದಾಯದ ಜನರ ಆರಾಧ್ಯ ದೈವಗಳಾದರು.

ಸಾಮಾನ್ಯವಾಗಿ ಪ್ರದೇಶವೊಂದರಲ್ಲಿರುವ ದೇವಾಲಯಗಳು ವಿವಿಧ ಧರ್ಮ ಸಮುದಾಯದ ಹಿನ್ನೆಲೆಯಲ್ಲಿ ವೈಯಕ್ತಿಕ ಭಿನ್ನತೆಗಳು ಆಚರಣೆಯಲ್ಲಿ ಇರುವುದು ಸಹಜ. ಆದರೆ ಒಂದು ನಿರ್ದಿಷ್ಟ ಸಮುದಾಯದ ಆಚರಣೆಯಲ್ಲಿ ಅನ್ಯ ಸಮುದಾಯದವರು ಪಾಲ್ಗೊಳ್ಳುವುದು ಸಾಂಸ್ಕೃತಿಕ ದೃಷ್ಟಿಯಿಂದ ವಿಶೇಷ. ಹಲವಾರು ಸಂದರ್ಭಗಳಲ್ಲಿ ಇಂತಹ ಸನ್ನಿವೇಶಗಳು ಮಾದೇಶ್ವರ ಬೆಟ್ಟದಲ್ಲಿವೆ. ಬೆಟ್ಟದಲ್ಲಿ ವರ್ಷದಲ್ಲಿ ನಾಲ್ಕು ಸಲ ವಿಶೇಷವಾಗಿ ಪರಿಶೆಯು ನಡೆಯುವುದನ್ನು ಕಾಣುತ್ತೇವೆ. ಅಲ್ಲಿ ನಡೆಯುವ ಅನೇಕ ರೀತಿಯ ಸೇವೆಗಳಲ್ಲಿ ಕರ್ನಾಟಕದ್ಯಾಂತ ಬಂದಿರುವಂತಹ ಎಲ್ಲಾ ಸಮುದಾಯಗಳ ಜನರು ಪಾಲ್ಗೊಂಡು ತನು ಮನ ಧನದಿಂದ ಸೇವೆಯನ್ನು ಮಾಡುತ್ತಾರೆ.

ಇಷ್ಟಲ್ಲದೇ ಮಾದೇಶ್ವರ ಬೆಟ್ಟದಲ್ಲಿ ಜರುಗುವ ಸೇವೆಗಳಲ್ಲಿ ಎಲ್ಲಾ ಸಮುದಾಯದ ಜನ ಕಾಣಿಕೆ ಕೊಡುತ್ತಾರೆ ಹಾಗೂ ಚಿನ್ನದ ತೇರು ಮತ್ತು ರಥೋತ್ಸವದಲ್ಲಿ ಭಾಗವಹಿಸುತ್ತಾರೆ.ಬೆಟ್ಟದಲ್ಲಿ ನಡೆಯುವ ಹಲವಾರು ಹರಕೆ, ಸೇವೆ, ಆಚರಣೆ, ಸಂಪ್ರದಾಯದಲ್ಲಿ ವಿವಿಧ ಸಮುದಾಯಗಳ ಸಾಮರಸ್ಯದ ಬದುಕು, ಅನೇಕತೆಯಲ್ಲಿ ಏಕತೆಯನ್ನು ಬಿಂಬಿಸುವಂತೆ ಪರಸ್ಪರ ಬಂಧುತ್ವದೊಂದಿಗೆ ಬದುಕುತ್ತಿರುವುದು ವಿಶಿಷ್ಟವಾಗಿದೆ.ಸಮುದಾಯದ ಐಕ್ಯತೆ, ಸಮಗ್ರತೆ, ಭಾವೈಕ್ಯತೆ ಸಾಮರಸ್ಯದ ದೃಷ್ಟಿಯಿಂದ ಎಲ್ಲಾ ಸಮುದಾಯದವರು ಇರಬೇಕೆಂಬ ಹಂಬಲ ಮಾದೇಶ್ವರನಿಗೆ ಇತ್ತು ಎಂಬುದು ಇಲ್ಲಿ ನಡೆಯುವ ಪರಿಶೆಗಳ ಕಾರಣವಾಗಿದೆ.

ಹಲವು ಜಾತಿಗಳ ಭಕ್ತರನ್ನು ಒಕ್ಕಲು ಮಾಡಿಕೊಂಡಿರುವ ಮಾದಪ್ಪನು ಅವರ ಮನ-ಮನೆಗಳಲ್ಲಿ ಮನೆದೇವರಾಗಿದ್ದಾನೆ. ಭಕ್ತ ಜನರು ತಮ್ಮ ಮಕ್ಕಳಿಗೆ ಅವನ ಹೆಸರಿಡುವುದು ಮತ್ತು ಪೂಜೆ ಸಲ್ಲಿಸುವ ಮೂಲಕ ಭಕ್ತಿ ಮೆರೆಯುತ್ತಿದ್ದಾರೆ. ಕೇವಲ ದಕ್ಷಿಣ ಕರ್ನಾಟಕಕ್ಕಷ್ಟೇ ಸೀಮಿತವಾಗದೇ ತಮಿಳುನಾಡು, ಕೇರಳ ರಾಜ್ಯಗಳ ವ್ಯಾಪ್ತಿಯಲ್ಲಿಯೂ ಭಕ್ತ ಸಮೂಹವನ್ನೊಂದಿರುವ ಮಾದಪ್ಪನನ್ನು ಮಠಗಳಲ್ಲಿ, ಗದ್ದುಗೆ ರೂಪದಲ್ಲಿ, ಹಲವಡೆ ಲಿಂಗರೂಪದಲ್ಲಿ ಆರಾಧಿಸಲಾಗುತ್ತದೆ.

ಮಾದೇಶ್ವರ ಬೆಟ್ಟಕ್ಕೆ ಅನೇಕ ಜಾತಿ ಸಮುದಾಯಗಳು ಬಹಳ ಹಿಂದಿನ ಕಾಲದಿಂದಲೂ ಕಾಲ್ನಡಿಗೆಯ ಮೂಲಕ ಬರುವುದನ್ನು ಕಾಣುತ್ತೇವೆ. ಇಲ್ಲಿ ನಡೆಯುವಂತಹ ಆಚರಣೆ, ಸಂಪ್ರದಾಯ, ಅಚಾರ–ವಿಚಾರ, ಹಾಗೂ ಸೇವೆಗಳಲ್ಲಿ ಯಾವುದೇ ಜಾತಿ ತಾರತಮ್ಯಗಳು ನಮಗೆ ಕಾಣಿಸುವುದಿಲ್ಲ. ಇದು ಒಂದು ಒಳ್ಳೆಯ ವ್ಯವಸ್ಥೆಯಾಗಿ ಮಾದೇಶ್ವರರ ಸನ್ನಿದಿಯಲ್ಲಿ ಇರುವುದು ಸಂತೋಷದ ಸಂಗತಿ. ಆದರೆ ಇದಕ್ಕೆ ಸಾಂಸ್ಕೃತಿಕ ಕಾರಣಗಳು ಹಲವು.ಮಾದೇಶ್ವರರ ಮೂಲ ನೆಲೆಯಾದ ಭೀಮನಕೊಲ್ಲಿಯಿಂದ ಹಿಡಿದ ಐಕ್ಯಗೊಂಡಿರುವ ನಡುಮಲೆ ಅಂದರೆ ಮಾದೇಶ್ವರ ಬೆಟ್ಟದ ನೆಲೆಗಳ ವರೆಗೂ ಹಲವಾರು ಊರು ಮತ್ತು ಪಟ್ಟಣಗಳನ್ನು ದಾಟಿ ಇಲ್ಲಿ ನೆಲೆಗೊಂಡಿದ್ದಾರೆ.

ಪಶ್ಚಿಮ ಘಟ್ಟಗಳ ಎಪ್ಪತ್ತೇಳು ಮಲೆಗಳ ನಡುವೆ ನೆಲೆಸಿದ ಮಾದೇಶ್ವರನ ಸಂಸ್ಕೃತಿ ಸಾಮ್ರಾಜ್ಯ ಕೋಟಿ–ಕೋಟಿ ಭಕ್ತರಿಗೆ ಪೂಜೆ, ಆಚರಣೆ, ಚರಿತ್ರೆ ಇತ್ಯಾದಿಗಳ ಬೆಳಕಿನಲ್ಲಿ ಭಕ್ತಿ ಸಂಸ್ಕೃತಿ ಪರಂಪರೆಯ ಕೇಂದ್ರವಾಗಿ ಬೆಳಗುತ್ತಿದೆ.ಆಚರಣೆಯ ದೃಷ್ಟಿಯಲ್ಲಿ ಶೈವ ವಿರಕ್ತ, ಜಾತ್ಯಾತೀತವಾದದ ಒಂದು ವಿಶಿಷ್ಟ ಪಂಥವಾಗಿ ಮಾದಪ್ಪನ ಪಂಥವಿದೆ.ಇಲ್ಲಿ ಕಂಪಣಬೇಡರು, ಸೋಲಿಗರು, ದಲಿತರು, ಕುರುಬರು, ಲಿಂಗಾಯಿತರು, ಒಕ್ಕಲಿಗರು, ಉಪ್ಪಾರರು, ತಮಿಳರು ಹೀಗೆ ಇನ್ನೂ ಅನೇಕ ಜಾತಿಮತದವರು ಈ ಪರಂಪರೆಯಲ್ಲಿ ತಮ್ಮ ಜಾತಿಮತಗಳ ಎಲ್ಲೆ ಮೀರಿ ಭಕ್ತಿಯನ್ನೇ ಕೇಂದ್ರವಾಗಿಸಿಕೊಂಡು ಸಾಮುದಾಯಿಕವಾಗಿ ತಮ್ಮ ತಮ್ಮ ಸಹಭಾಗಿತ್ವದೊಂದಿಗೆ ಪೂಜಿಸುತ್ತಾ ಬಂದಿದ್ದಾರೆ.

**ದಲಿತರು**

ಮಾದೇಶ್ವರ ಪರಂಪರೆಯಲ್ಲಿ ದಲಿತರ ಸಹಭಾಗಿತ್ವವು ಅತ್ಯಂತ ಮಹತ್ವವಾದದ್ದು.ಇವರು ಚಾಮರಾಜನಗರ, ಮಂಡ್ಯ, ಮೈಸೂರು, ಇನ್ನಿತರ ಕಡೆಗಳಿಂದ ಮಾದೇಶ್ವರ ಬೆಟ್ಟದಲ್ಲಿ ಪ್ರತಿ ವರ್ಷ ಜರುಗುವ ಶಿವರಾತ್ರಿ, ಯುಗಾದಿ, ಮಹಾಲಯ ಅಮಾವಾಸ್ಯೆ.ಮತ್ತು ದೀಪಾವಳಿಯಲ್ಲಿ ನಡೆಯುವ ಜಾತ್ರೆ, ಉತ್ಸವಕ್ಕೆ ಲಕ್ಷಾಂತರ ಭಕ್ತರೂ ಸೇರುವುದು ವಿಶೇಷ. ಅದರಲ್ಲಿ ದಲಿತರ ಪಾಲ್ಗೋಳ್ಳುವಿಕೆ ಹೆಚ್ಚಿನ ಸಂಖ್ಯೆಯಲ್ಲಿ ಬಂದಿರುವುದನ್ನು ಕಾಣಬಹುದಾಗಿದೆ.

ಸಾಮಾನ್ಯವಾಗಿ ಜಾತ್ರೆಯ ಸಂದರ್ಭದಲ್ಲಿ ನಡೆಯುವಂತಹ ಜಾತ್ರೆಗಳಲ್ಲಿ ರಜ ಹೊಡೆಯುವ ಸೇವೆಯಲ್ಲಿ ದಲಿತರ ಪಾತ್ರ ಬಹಳ ಮುಖ್ಯವಾಗಿರುತ್ತದೆ.ಇವರು ಮಾದೇಶ್ವರನಿಗೆ ಹರಕೆಯನ್ನು ಕಟ್ಟಿಕೊಂಡಂತೆ ಪ್ರತಿ ವರ್ಷವೂ ಶಿವರಾತ್ರಿ ಮತ್ತು ಯುಗಾದಿ ಜಾತ್ರೆಗಳ ಸಂದರ್ಭದಲ್ಲಿ ಇವರು ಈ ಸೇವೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಆಚರಣೆ ಮಾಡಿಕೊಂಡು ಬಂದಿರುವಂತಹದ್ದನ್ನು ಕಾಣಬಹುದು.ಬೆಟ್ಟದಲ್ಲಿ ಜರುಗುವ ಇನ್ನಿತರ ಸೇವೆಗಳಾದ ಪಂಜಿನಸೇವೆ, ಧೂಪದಸೇವೆ, ಊರುಳುಸೇವೆ, ಇನ್ನಿತರ ಸೇವೆಗಳನ್ನು ಮಾಡುವುದು ವಿಶೇಶವಾಗಿ ಕಂಡುಬರುತ್ತದೆ.ಇದನ್ನೇ ಸಹಭಾಗಿತ್ವ ಎಂದು ಕರೆಯುತ್ತೇವೆ.

ಪರಿಶೆಯ ಜನರು ಮಾದೇಶ್ವರ ಸನ್ನಿದಿಗೆ ಬರುವ ಭಕ್ತರು ಹಲವಾರು ರೀತಿಯ ಹರಕೆ ಹೊತ್ತು ಹಾಗೂ ತಾವು ಹಿಂದೆ ಹರಕೆ ಮಾಡಿಕೊಂಡಿದ್ದನ್ನು ತೀರಿಸಲುಭವಿಷ್ಯದ ಬದುಕು ಹಸನಾಗಲೆಂದು ಇಲ್ಲಿಗೆ ಬೇಟಿ ನೀಡಿ ಪೂಜೆ ಸಲ್ಲಿಸುತ್ತಾರೆ. ಹೀಗಾಗಿ ಒಂದು ಕಡೆ ಭಕ್ತಿ ಮುಖ್ಯವಾಗುತ್ತದೆ.ಮತ್ತೊಮದು ಕಡೆ ಭಕ್ತಿಯ ಹೆಸರಲ್ಲಿ ಬದುಕು ನಡೆಯುತ್ತದೆ.ಇದೊಂದು ಇನ್ನೊಂದು ರೀತಿಯ ಸಹಭಾಗಿತ್ವವಾಗಿದೆ.

**ಕುರುಬರು**

ಚಾಮರಾಜನಗರ ಜಿಲ್ಲೆಯಲ್ಲಿ ಕುರುಬರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.ಇವರ ಪಾರಂಪರಿಕ ಕಸುಬಗಳೆಂದರೆ ಕುರಿ ಸಾಕುವುದು ಮತ್ತು ಉಣ್ಣೆಯಿಂದ ಕಂಬಳ ನೇಯುವುದು.ಇವರ ಹೆಚ್ಚಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ.ಇವರು ಮಹಾಲಯ ಅಮಾವ್ಯಾಸೆಯ ನಂತರದ ಮೊದಲ ದಿನ ಮತ್ತು ಹೊಸ ವರ್ಷದ ದಿನ ಎಲ್ಲಾ ಪೂರ್ವಜರನ್ನೂ ಆರಾಧಿಸುತ್ತಾರೆ.ಕುರುಬರು ಉತ್ತಮವಾಗಿ ವ್ಯವಸ್ಥೆಗೊಂಡಿರುವ ಒಂದು ಸಮುದಾಯ.ಇಡೀ ಜಾತಿಯನ್ನು ಅನೇಕ ಪ್ರಾದೇಶಿಕ ಭಾಗಗಳಾಗಿ ವಿಂಗಡಿಸಲಾಗಿದ್ದು ಪ್ರತಿಯೊಂದಕ್ಕೂ ಓರ್ವ ಗೌಡ ಅಥವಾ ಮುಖಂಡನಿರುತ್ತಾನೆ.ಕೆಲವು ಕುರುಬ ಸಮುದಾಯದವರು ಕೆಲವೊಂದು ಪೂಜೆ ಕಾರ್ಯಕ್ರಮಗಳಗೆ ಲಿಂಗಾಯಿತರು ಮತ್ತು ಬ್ರಾಹ್ಮಣರು ಮಾಡುತ್ತಾರೆ.ಇವರು ಶೈವ ಪಂಥೀಯರಾದರೂ ಕುರುಬರು ಎಲ್ಲಾ ಹಿಂದೂ ದೇವರುಗಳನ್ನು ಪೂಜಿಸುತ್ತಾರೆ.ಇವರ ಕುಲ ದೇವರು ಬೀರ ಅಥವಾ ವೀರನೆಂದು ಕರೆಯಲ್ಪಡುವ ಶಿವ. ಇನ್ನುಳಿದ ದೇವತೆಗಳೆಂದರೆ ಮೈಲಾರ ಸಿದ್ಧರಾಮಶ್ವೇರ, ಯಲ್ಲಮ್ಮ, ಮುಂತಾದವರು.ಇವರರಲ್ಲಿ ಮುಖ್ಯವಾಗಿ ಬೀರದೇವರ ಕುಣಿತವೂ ಪ್ರಸಿದ್ಧಿಯಾಗಿದೆ.

ಏನೇ ಇದ್ದರೂ ಬೀರೇಶ್ವರ, ಮೈಲಾರಲಿಂಗೇಶ್ವರ, ಮಾದೇಶ್ವರ ಇವರನ್ನು ಪೂಜಿಸುವ ಮೂಲಕ ಶೈವಪಂಥಾರಾಧಕರಾಗಿದ್ದಾರೆಂಬುದರಲ್ಲಿ ಅನುಮಾನವಿಲ್ಲ. ಹಾಗಾಗಿ ಮಾದೇಶ್ವರ ಪರಂಪರೆಯಲ್ಲಿ ಇವರ ಸಹಮತ ಹಾಗೂ ಸಹಭಾಗಿತ್ವವೂ ಇಂದಿಗೂ ಇದೆ. ಮಾದೇಶ್ವರ ಸಾಂಸ್ಕೃತಿಕ ಪರಂಪರೆಯಲ್ಲಿ ಕುರುಬರ ಪಾತ್ರವು ಮಹತ್ವವಾದದ್ದು.ಇವರಲ್ಲಿಯೂ ಸಹ ಮಾದೇಶ್ವರ ದೇವರಗುಡ್ಡರ ದೀಕ್ಷೆಯನ್ನು ಪಡೆಯುತ್ತಾರೆ.ಹಾಗೆಯೇ ಇವರು ಮಾದೇಶ್ವರನ ಪಂಥವನ್ನು ಉಳಸಲು ಮತ್ತು ಬೆಳೆಸಲೂ ಈ ದೀಕ್ಷಾ ಕ್ರಮವನ್ನು ಅನುಸರಿಸುತ್ತಿದ್ದಾರೆ.ಅದರಲ್ಲೂ "ನಾಗಮಲೆ" ಭೌತಿಕ ಪರಿಸರದ ಭಕ್ತಿದಾಮದ ಉಗಮದ ಹಿಂದೆ ಕುರುಬರ ಹುಡುಗನ ಪಾತ್ರವಿದೆ ಕುರಿತು ಒಂದು ಕಥೆಯೇ ಇದೆ.

ಹೀಗೆ ಒಂದು ಭಕ್ತಿಧಾಮ ಉಗಮಕ್ಕೆ ಕಾರಣನಾಗಿ ಒಂದು ರೀತಿಯ ಭಕ್ತಿಪರಂಪರೆ ಹುಟ್ಟು ಹಾಕಿದ ಕೀರ್ತಿ ಕುರುಬರಿಗೆ ಸಲ್ಲುತ್ತದೆ. ಹಾಗಾಗಿ ಮಹದೇಶ್ವರರ ಪರಂಪರೆಯ ಸಹಭಾಗಿತ್ವದಲ್ಲಿ ಕುರುಬರ ಪಾಲಿದೆ ಎಂಬುದನ್ನು ಮರೆಯುವಂತಿಲ್ಲ.

**ಲಿಂಗಾಯಿತರು**

ಈ ಒಂದು ಸಮುದಾಯವು ರಾಜ್ಯಾದ್ಯಂತ ಹರಡಿಕೊಂಡಿರುವುದನ್ನು ಕಾಣಬಹುದಾಗಿದೆ. ಇವರು ಚಾಮರಾಜನಗರ ಜಿಲ್ಲೆಯಲ್ಲಿ ಗಣನೀಯವಾಗಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರು ಕೃಷಿ, ವಾಣಿಜ್ಯ, ಕೈಗಾರಿಕೆ, ಸರ್ಕಾರಿ ಸೇವೆ ಮುಂತಾದ ಬೇರೆ ಬೇರೆ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಇವರು ಕೊಳ್ಳೇಗಾಲ, ಚಾಮರಾಜನಗರ, ಗುಂಡ್ಲುಪೇಟೆಯ ಕಡೆಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ.

ಸಾಲೂರು ಮಠವು ಈ ಕಾರಣಕ್ಕಾಗಿಯೇ ಸ್ಥಾಪಿತವಾದ ಮಠ.ಬೇಡಗಂಪಣ ಜನರನ್ನು ಒಂದು ತೆಕ್ಕೆಯಲ್ಲಿ ತರುವುದಕ್ಕಾಗಿ ಜೊತೆಗೆ ಅವರಿಗೆ ಒಂದು ಧಾರ್ಮಿಕ ನೆಲೆಯನ್ನು ಒದಗಿಸುವುದಕ್ಕಾಗಿ ಈ ಮಠವನ್ನು ಸ್ಥಾಪಿಸಿರಬೇಕು.ದೇವಸ್ಥಾನಕ್ಕೆ ಹೊಂದಿಕೊಂಡಂತೆ ಅವುಗಳ ಅಂಗವಾಗಿ ಮಠವಿದ್ದಿತು.ಮಠಕ್ಕೆ ಪ್ರತ್ಯೇಕ ಅಸ್ತಿತ್ವವಿದ್ದಿಲ್ಲ. ಆದ್ದರಿಂದ ಒಂದು ರೀತಿಯಲ್ಲಿ ಅವೆರಡು ಅಭಿನ್ನ.ಒಟ್ಟಿನಲ್ಲಿ ಸಾಲೂರು ಮಠ ಮತ್ತು ಮಾದೇಶ್ವರ ಈ ಎರಡೂ ಅಂಶಗಳು ವೀರಶೈವ ಧರ್ಮದ ಬೆಳವಣಿಗೆಗೆ ಕಾರಣವಾಯಿತು.

ಆದರೂ ಬೇಡಗಂಪಣರು ಮೂಲವಾಗಿ ವೀರಶೈವ ಧರ್ಮದಲ್ಲಿ ಗುರುತಿಸಿಕೊಳ್ಳಲಾಗಲಿಲ್ಲ. ನಾಗರಿಕ ಸಮಾಜದ ವೀರಶೈವ ಧಾರ್ಮಿಕ ವಲಯದಿಂದ ಪ್ರತ್ಯೇಕವಾಗಿ ಉಳಿದರು. ವೀರಶೈವರ ಜೊತೆ ವಿವಾಹ ಸಂಬಂಧಗಳು ಏರ್ಪಡಲಿಲ್ಲ. ಅವರು ಲಿಂಗಾಯತರಾಗಬೇಕಾದರೆ ವಿವಾಹ ಸಂಬಂಧಗಳು ಏರ್ಪಡಬೇಕು. 'ವೀರಶೈವ' ಸಮಾಜದಲ್ಲಿ ಜಾತಿಗಳ ನಿರ್ಮೂಲವಾಗಲು ಯಾವುದೇ ನಿರ್ಬಂಧವೂ ಇಲ್ಲದಂತೆ ವಿವಾಹ ಸಂಬಂಧಗಳು ನಡೆಯುವುದೊಂದೇ ಮಾರ್ಗವಾಗಿದೆ.ಒಟ್ಟಿನಲ್ಲಿ ಬೇಡಗಂಪಣರು ವೀರಶೈವ ಮತಕ್ಕೆ ಮತಾಂತರಗೊಂಡು ಲಿಂಗಧಾರಣೆ ಮಾಡಿಕೊಂಡರು.ಈಗ ಇವರ ಆಚಾರ, ವಿಚಾರ, ಕಾರ್ಯಕ್ರಮಗಳಲ್ಲಿ ವೀರಶೈವ ಧಾರ್ಮಿಕ ಆಚಾರ ವಿಚಾರಗಳ ಜೊತೆಗೆ ಕಾಡಿನ ಸಾಂಸ್ಕೃತಿಕ ಅಂಶಗಳನ್ನು ಗುರುತಿಸಬಹುದಾಗಿದೆ.

ಶಿವರಾತ್ರಿ ಸಮಯದಲ್ಲಿ ಮಾದೇಶ್ವರನ ಬೆಟ್ಟದಲ್ಲಿ ವಿಶೇಷ ಪೂಜೆ, ಉತ್ಸವ ಆಚರಣೆಗಳನ್ನು ಹಮ್ಮಿಕೊಳ್ಳಲಾಗುತ್ತದೆ.ಈ ಹಬ್ಬದಂದು ಮುಖ್ಯವಾಗಿ ರಥೋತ್ಸವ, ಕೊಂಡೋತ್ಸವ, ಓಕುಳಿ ಉತ್ಸವಗಳನ್ನು ನಡೆಸಲಾಗುತ್ತದೆ.ಶಿವರಾತ್ರಿಯ ಹಿಂದಿನ ದಿನ ಉತ್ಸವಮೂರ್ತಿಯನ್ನು ಸಾಲೂರು ಮಠಕ್ಕೆ ತೆಗೆದುಕೊಂಡು ಹೋಗಲಾಗುತ್ತದೆ.ಅಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಿ ಶಿವರಾತ್ರಿ ಹಬ್ಬದ ಬೆಳಗ್ಗೆ ಉತ್ಸವ ಮೂರ್ತಿಯನ್ನು ಸಾಲೂರು ಮಠದಿಂದ ಮೆರವಣಿಗೆ ಮಾಡಿಕೊಂಡು ದೇವಸ್ಥಾನಕ್ಕೆ ತರಲಾಗುತ್ತದೆ.ಜೊತೆಯಲ್ಲಿ ಸಾಲೂರು ಮಠದ ಗುರುಗಳು ಇರಬೇಕು. ಇದನ್ನು 'ಗುರುಶಿಷ್ಯ' ಪ್ರವೇಶವೆಂದು ಕರೆಯುತ್ತಾರೆ.

ದೇವಸ್ಥಾನದ ಯಾವುದೇ ಕಾರ್ಯಕ್ರಮ ಅಥವಾ ಪೂಜೆಯು ಪ್ರಾರಂಭವಾಗಬೇಕಾದರೆ ಸಾಲೂರು ಮಠದ ಸ್ವಾಮಿಗಳೇ ಬಂದು ಪೂಜೆ ಸ್ವೀಕರಿಸಿ ನಂತರದ ಕಾರ್ಯಕ್ರಮಗಳನ್ನು

ಮುಂದುವರೆಸುತ್ತಾರೆ.ಶಿವರಾತ್ರಿ, ಯುಗಾದಿ, ದೀಪಾವಳಿಯಲ್ಲಿ ಭಕ್ತರು ತಪ್ಪದೇ ಮಾದೇಶ್ವರ ಬೆಟ್ಟಕ್ಕೆ ಬರುತ್ತಾರೆ.ರಾಗಿ, ಭತ್ತ, ಇತರೆ ಧಾನ್ಯಗಳನ್ನು ತಂದು ಅಡುಗೆ ಮಾಡಿ ಪರ ಮಾಡುತ್ತಾರೆ. ಲಿಂಗಾಯತರು ಮಾತ್ರ ಪ್ರತಿ ಮನೆಯಿಂದಲೂ 3–4 ಜನ ಬಂದು ಯುಗಾದಿಗೆ ಬಂದು ಆಚರಿಸಿ ಹೋಗುತ್ತಾರೆ. ಇದೇ ಯುಗಾದಿ ಪರಿಶೆಗೆ ತಮಿಳುನಾಡಿನ ಲಿಂಗಾಯಿತರೂ ಕೂಡ ಬರುತ್ತಾರೆ ಎಂಬುದು ವಿಶೇಷ.

**ಒಕ್ಕಲಿಗರು**

ಸಾಂಪ್ರದಾಯಿಕವಾಗಿ ವ್ಯವಸಾಯ ಮಾಡುತ್ತಿದ್ದವರನ್ನು ಒಕ್ಕಲು ಮಕ್ಕಳು ಎಂದು ಗುರುತಿಸಲಾಗುತ್ತದೆ. ಈ ಹಿಂದೆ ಗ್ರಾಮದ ಮುಖಂಡತ್ವ ಇವರದೇ ಆಗಿರುತ್ತಿದ್ದುದರಿಂದ 'ಗೌಡ' ಎಂಬ ಹೆಸರು ಇವರಿಗಿದೆ.ನನ್ನ ಮುಂದಿನ ಚರ್ಚೆಯು ಇದೇ ಅಭಿಪ್ರಾಯದೊಂದಿಗೆ ನಡೆಯುತ್ತದೆ. ಅಂದರೆ ಒಕ್ಕಲಿಗ ಮತ್ತು ಗೌಡ ಒಂದೇ ಎಂಬ ಅಭಿಪ್ರಾಯದಲ್ಲಿ ಇತ್ತೀಚಿನ ದಿನಗಳಲ್ಲಿ ವ್ಯವಸಾಯದ ಜೊತೆಗೆ ವ್ಯಾಪಾರ, ನೌಕರಿ ಮುಂತಾದ ಉದ್ಯೋಗಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಇವರು ಸೋಮವಾರದವರು, ಶನಿವಾರದವರು ಎಂದು ತಾವು ಪೂಜಿಸುವ ದೇವರ ಹಿನ್ನೆಲೆಯಲ್ಲಿಯೂ ಗುರುತಿಸಲ್ಪಡುತ್ತಾರೆ. ಸೋಮವಾರದವರು ನಂಜುಂಡೇಶ್ವರ, ಮಾದೇಶ್ವರ, ಮುಡುಕುತೊರೆ ಮಲ್ಲಿಕಾರ್ಜುನ, ಆದಿಚುಂಚನಗಿರಿ ಭೈರವ, ಗಂಗಾಧರ ಮೊದಲಾದ ಶೈವ ಪರಂಪರೆಯ ಒಕ್ಕಲಾದರೆ ಶನಿವಾರದಂದು ತಿರುಪತಿ ವೆಂಕಟರಮಣ, ಮೇಲುಕೋಟೆ ಚಲುವನಾರಯಣ, ಬಿಳಿಗಿರಿರಂಗನಾಥ ಮುಂತಾದ ವಿಷ್ಣುವಿನಂಶದ ಒಕ್ಕಲಾಗಿರುತ್ತದೆ. ಜೊತೆಗೆ ಸ್ಥಳೀಯ ಗ್ರಾಮದೇವತೆಗಳಿಗೂ ನಡೆದುಕೊಳ್ಳುತ್ತಾರೆ. ಇದೇ ರೀತಿಯಲ್ಲಿ ನಾವು ಮೊದಲು ಕುರುಬ ಮತ್ತು ದಲಿತರನ್ನು ಈ ಪಥದಲ್ಲಿಯೇ ಗುರುತಿಸಿದ್ದೇವೆ. ಅವರಲ್ಲೂ ಕೂಡ ಶೈವ ಮತ್ತು ವೈಷ್ಣವ ಪೂಜಾ ಆರಾಧಕರಿದ್ದಾರೆ.ಇಲ್ಲಿ ನನ್ನ ಮುಖ್ಯ ಚರ್ಚೆ ಶೈವ, ವೈಷ್ಣವವಲ್ಲ, ಒಕ್ಕಲಿಗರು, ಶೈವ ಆರಾಧಕರು ಎಂಬುದನ್ನು ಸ್ಮರಿಸುತ್ತಾ, ಮಾದೇಶ್ವರ ಪರಂಪರೆಯಲ್ಲಿ ಈ ಒಕ್ಕಲಿಗರ ಪಾತ್ರವೇನು ಎಂಬುದಕ್ಕೆ ಈ ಮೇಲಿನ ಚರ್ಚೆಯನ್ನು ಪೀಠಿಕೆಯಾಗಿ ಹೇಳಿದ್ದೇನೆ. ಒಕ್ಕಲಿಗರು ಮಾದೇಶ್ವರ ಪರಂಪರೆಯಲ್ಲಿ ಅದರಲ್ಲೂ ಮಾದೇಶ್ವರ ದೇವಸ್ಥಾನ, ಅದರ ಜಾತ್ರೆ, ಆಚರಣೆ, ಸಂಪ್ರದಾಯ ಹಾಗೂ ಪರಿಶೆಗಳಲ್ಲಿ ಅವರ ಸಹಭಾಗಿತ್ವ ಹೇಗೆ ಮಿಳಿತಗೊಂಡಿರುತ್ತದೆ ಎಂಬುದನ್ನು ಸಂಕ್ಷಿಪ್ತವಾಗಿ ಇಲ್ಲಿ ನೋಡಬಹುದು.

ಮಲೆಮಾದಪ್ಪನ ಗುಡಿಯ ಬಲಭಾಗದಲ್ಲಿರುವ ಪ್ರಕಾರದ ಗೋಡೆ ಮೇಲಿನ ದೊಡ್ಡ ಬಸವ ಆಲಂಬಾಡಿಯ ಕಡೆಗೆ ಅಂದರೆ ಬಲಗಡೆಗೆ ಮುಖ ತಿರುಗಿಸಿ ಕೂತಿದೆ.ಅದಕ್ಕೆ ಕಾರಣ ಅದು ಆಲಂಬಾಡಿಯಿಂದ ದಾನಕೊಟ್ಟು ಕರುವಾಗಿದೆ ಎಂಬ ಮೌಖಿಕ ಮಾಹಿತಿ ಭಕ್ತಾದಿಗಳಿಂದ ದೊರೆಯುತ್ತದೆ.ವಾಸ್ತವವಾಗಿ ಬಸವ ಮಾದೇಶ್ವರನ ಕಡೆಗೆ ನೋಡಬೇಕೆಂದರೆ ಎಡಗಡೆ ಕತ್ತು ತಿರುಗಿಸಬೇಕಿತ್ತು. ಸಾಮಾನ್ಯವಾಗಿ ಶೈವ ದೇವಸ್ಥಾನಗಳಲ್ಲಿ ಬಸವ ದೇವರನ್ನು ನೋಡುವಂತೆ

ಕೆತ್ತಿರುವುದು ಪರಿಪಾಠವಾಗಿದೆ.ಮಾದಪ್ಪನ ಗುಡಿಯಲ್ಲಿ ಮಾತ್ರ ಬಸವ ದೇವರ ಕಡೆ ಬಿಟ್ಟು ಬಲಗಡೆಗೆ ಕತ್ತು ಹೊರಳಿಸಿ ಕೂತಿರುವ ರೀತಿಗೆ ಬೇರೆ ಏನೇನು ಸಾಂಕೇತಿಕ ಅರ್ಥಗಳಿವೆಯೋ ಮತ್ತಷ್ಟು ಪರಿಶೀಲನೆ ಮಾಡುವ ಅಗತ್ಯವಿದೆ.ಆಲಂಬಾಡಿ ಬಸವನನ್ನು ದನಗಳು ದಿಟ್ಟಿಸಿ ನೋಡಿದರೆ ಅವು ಗಬ್ಬವಾಗುತ್ತವೆ ಎನ್ನುವ ನಂಬಿಕೆ ಇರುವುದರಿಂದ ಗಬ್ಬವಾಗದ ಹಸುಗಳನ್ನು ಬೆಟ್ಟಕ್ಕೆ, ಬಸವನ ದರ್ಶನಕ್ಕಾಗಿ ಭಕ್ತಾದಿಗಳು ಕರೆದುಕೊಂಡು ಬರುವುದೂ ಉಂಟು.ಮಾದಪ್ಪನ ಪರಂಪರೆಯಲ್ಲಿ ತಾಂತ್ರಿಕ ಆಚರಣೆಗಳಿಗೂ ಸ್ಥಾನವಿದೆ.ಈಗಿರುವ ರೀತಿಯಲ್ಲಿ ಹೇಳಬೇಕೆಂದರೆ ಗುಡಿ ದೇವಸ್ಥಾನ ಅರ್ಚನೆ, ಅಭಿಷೇಕ ಮುಂತಾದವುಗಳೆಲ್ಲ ಶೈವಾಗಮನವನ್ನು ಆಧರಿಸಿದ ಶುದ್ಧ ಶೈವಪಂಥಕ್ಕೆ ಸಂಬಂಧಿಸಿದ ಪದ್ಧತಿಗಳಾಗಿವೆ. ಜುಂಜೇಗೌಡನಿಂದ ಗುಡಿ ನಿರ್ಮಾಣವಾಯಿತು ಎಂಬುದಕ್ಕೆ ಹೊಯ್ಸಳ ಕಾಲದ ಈ ಶಾಸನವನ್ನು ನಾವು ಗಮನಿಸಬಹುದು.

"1345ರಲ್ಲಿ ಹೊಯ್ಸಳ ದೊರೆ ವೀರ ಬಲ್ಲಾಳನು ಬರೆಸಿದ ತಾಮ್ರ ಶಾಸನದಲ್ಲಿ 'ಶ್ರೀ' ಮಾದೇಶ್ವರ ಸ್ವಾಮಿಯು ಕತ್ತಲ ರಾಜ್ಯದೊಳು ಇದ್ದು ಕನ್ಯಾಳ ದೇಶಕ್ಕೆ ಬಂದು ಸಮಸ್ತ ದೇವತೆಗಳು ಶ್ರವಣನಲ್ಲಿ ಸೇರಿರುವುದಂ ನೋಡಿ ಅವನಂ ಸಂಹಾರ ಮಾಡಿ ಪ್ರಭುಲಿಂಗಾರಾಧ್ಯರಿಂದ ಲಿಂಗಧಾರಿಣಿಯಂ ಮಾಡಿಸಿಕೊಂಡು ವಜ್ರಮಲೆಯಲ್ಲಿ ನೆಲೆಗೊಂಡು ಅಲಂಬಾಡಿ ಜುಂಜೇಗೌಡನಿಂದ ವಂದು-ಅಂಕಣದೇವಾಲಯವಂ ಕಟ್ಟಿಸಿಕೊಂಡು" ಎಂದು ಹೇಳಿರುವುದರಿಂದ 1345 ಸಮಯಕ್ಕಾಗಲೇ ಆಲಂಬಾಡಿ ಜುಂಜೇಗೌಡ ಎಂಬುವನಿಂದ ದೇವಸ್ಥಾನದ ಒಂದು ಅಂಕಣ ಗುಡಿ ರಚನೆಯಾಗಿರಬಹುದಾದ ಸಾಧ್ಯತೆಯಿದೆ ಬಹದ್ದೂರ್ ಹೈದರಾಲಿಯ ಶಾಸನದಲ್ಲಿಯೂ "ಮಾದೇಶ್ವರ ಸ್ವಾಮಿ ಕರ್ತಲ್ಲಿ ರಾಜ್ಯದ ರಿಪು ಕೊಂಕನ ಲಾಳಕ ದೇಶಕ್ಕೆ ಬಂದು ಶ್ರವಣರಲ್ಲಿ ಸಮಸ್ತ ದೇವರುಗಳೆಲ್ಲಾ ಸೆರೆಸಿಕ್ಕಿಯಿದ್ದದು ನೋಡಿ ಆ ಶ್ರವಣನಂ ಸಂಹಾರಮನ್ನು ಮಾಡಿ ಜಗಕ್ಕೆಲ್ಲಾ ತಾನೇ ದೇವರಾಗಿ ವಜ್ರಮಲೆಯಲ್ಲಿ ನೆಲೆಗೊಂಡ ಆಲಂಬಾಡಿ ಜುಂಜೇಗೌಡನಿಂದ ಒಂದು ಅಂಕಣ ನಿವೇಶನ ಕಟ್ಟಿಸಿಕೊಂಡು" ಎಂದಿದೆ.ಈ ಎಲ್ಲಾ ಹಿನ್ನೆಲೆಯಲ್ಲಿ ಜುಂಜೇಗೌಡನು ದೇವಸ್ಥಾನದ ಒಂದು ಅಂಕಣ ಗರ್ಭಗುಡಿಯನ್ನು ಕಟ್ಟಿಸಿದನೆಂದು ತಿಳಿಯಬಹುದಾಗಿದೆ.14ನೇ ಶತಮಾನದ ಪೂರ್ವಾರ್ಧದಲ್ಲಿ ಈ ಒಂದು ಅಂಕಣ ರಚನೆಯಾಗಿದೆ.

ಎರಡೂ ಶಾಸನಗಳಲ್ಲೂ ಒಂದು ಅಂಕಣ ಎಂಬ ಪ್ರಸ್ತಾವನೆ ಬರುತ್ತದೆ.ಆದರೆ ಜನಪದ ಸಾಹಿತ್ಯದಲ್ಲಿ ಮತ್ತು ಇತರೆ ಕೆಲವೊಂದು ಉಲ್ಲೇಖಗಳಲ್ಲಿ ಎರಡು ಅಂಕಣ ಎಂಬ ಪ್ರಸ್ತಾಪ ಬರುತ್ತದೆ.ಇಲ್ಲಿ ಯಾವುದೇ ಗೊಂದಲಗಳಿಲ್ಲದಿರುವುದನ್ನು ದೇವಸ್ಥಾನವನ್ನು ವೀಕ್ಷಿಸಿದಾಗ ಸ್ಪಷ್ಟವಾಗುತ್ತದೆ.ದೇವಸ್ಥಾನದ ಮೂಲರಚನೆ ನೋಡಿದಾಗ ಗರ್ಭಗುಡಿ ಮಾತ್ರ ತೆಗೆದುಕೊಂಡರೆ ಒಂದು ಅಂಕಣವೇ ಆಗುತ್ತದೆ.ತದನಂತರ ರಚನೆಗಳನ್ನು ವೀಕ್ಷಿಸಿದಾಗ ಅಂದಿನ ರಚನೆ ಮೂರು ಅಂಕಣ ಒಳಗೊಳ್ಳುತ್ತದೆ. ಗರ್ಭಗುಡಿಯ ಮುಂದಿನ ಒಂದು ಅಂಕಣ ಕಲ್ಲು ಹೊದಿಸಿದ ತೆರೆದ ಸುಖನಾಸಿಯಂತೆ

ರಚನೆಯಾಗಿರುವುದು ಸ್ಪಷ್ಟವಾಗುತ್ತದೆ.ಮತ್ತೆ ಮುಂದಿನ ಒಂದು ಅಂಕಣದಲ್ಲಿ ಬಸವನನ್ನು ಇಡಲಾಗಿತ್ತು.ಈ ಮೂರನ್ನು ಸೇರಿಸಿದರೆ ಮೂರು ಅಂಕಣವಾಗುತ್ತದೆ.ಕೇವಲ ಗರ್ಭಗುಡಿ ತೆಗೆದುಕೊಂಡರೆ ಒಂದು ಅಂಕಣವಾಗುತ್ತದೆ.

ಮಾದೇಶ್ವರನ ಬೆಟ್ಟಕ್ಕೆ ಬರುವ ಭಕ್ತರು ವಿಶೇಷ ಸಂದರ್ಭಗಳಲ್ಲಿ ಅದರಲ್ಲೂ ಶಿವರಾತ್ರಿ ಪರಿಶೆಗೆ ಶೇ.೩೦ರಷ್ಟು ಜನ ಪಾದಯಾತ್ರೆ ಮುಖಾಂತರವೇ ಬೆಟ್ಟಕ್ಕೆ ಬರುತ್ತಾರೆ.ಎಂಟು ವರ್ಷಗಳಿಂದ ಹದಿನಾರು ವರ್ಷದವರೆಗೆ ನಡೆದುಕೊಂಡು ನಡೆದುಕೊಂಡು ಬಂದಿರುವ ಉದಾಹರಣೆಗಳಿವೆ. ಇದರಲ್ಲೂ ಒಕ್ಕಲಿಗರ ಪಾತ್ರ ಪ್ರಮುಖವಾದದ್ದು.ಉಪ್ಪಾರ, ನಾಯ್ಕ, ಕುರುಬ, ಹೊಲೆಯ, ಮಾದಿಗ ಜನಾಂಗದವರು ಕೂಡ ಪಾದಯಾತ್ರೆ ಬಂದರೂ ಒಕ್ಕಲಿಗರು ಬಹುಸಂಖ್ಯೆಯಲ್ಲಿ ಬರುತ್ತಾರೆಂಬುದನ್ನು ಅಲ್ಲಗಳೆಯುವಂತಿಲ್ಲ.

ಒಟ್ಟಾರೆ ಮಲೆಮಾದೇಶ್ವರ ಪರಂಪರೆಯಲ್ಲಿ ಒಕ್ಕಲಿಗ'ನಾದ ಜುಂಜೇಗೌಡ ಗುಡಿಯ ಕಟ್ಟಿಸುವ ಕೆಲಸದ ಹಾದಿಯಾಗಿ ಎಲ್ಲಾ ವಿಶೇಷ ಹಬ್ಬ ಜಾತ್ರೆ ಪರಿಶೆಗಳಲ್ಲಿ ಒಕ್ಕಲಿಗರು ಪಾಲ್ಗೊಂಡು ಅಲ್ಲದೇ ಪಾದಯಾತ್ರೆ ಮಾಡಿಕೊಂಡು ನಾಡಿನ ಮೂಲೆಯಿಂದ ಒಕ್ಕಲಿಗರು ಬರುವುದನ್ನು ನಾವು ಗಮನಿಸಬಹುದು.ಹಾಗಾಗಿ ಮಾದೇಶ್ವರ ಪರಂಪರೆಯಲ್ಲಿ ಒಕ್ಕಲಿಗರ ಸಹಭಾಗಿತ್ವವು ಪ್ರಮುಖ ಪಾತ್ರ ವಹಿಸುತ್ತದೆ.

**ಉಪ್ಪಾರರು**

ಮಲೆಮಾದಪ್ಪನ ಕಥನದಲ್ಲಿ ಉಪ್ಪಲಿಗಶೆಟ್ಟರ ಪ್ರಸ್ತಾಪ ವಿಶೇಷವಾಗಿ ಬರುತ್ತದೆ.ಕಾವ್ಯದಲ್ಲಿ ಬರುವ ಮೂಗಯ್ಯ ರಾಮವ್ವೆ ಎಣ್ಣೆಮಜ್ಜನದ ಸೇವೆ ಮಾಡಲು ಒಪ್ಪಿಕೊಳ್ಳುವುದು.ಆ ನಂತರದಲ್ಲಿ ಅದು ಅನಾಚನವಾಗಿ ನಡೆದುಕೊಂಡು ಬಂದಿರುವುದು ಮತ್ತು ಈ ದಂಪತಿಗಳು ಉಪ್ಪಲಿಗಶೆಟ್ಟರೆಂಬುದು ಆಸಕ್ತಿದಾಯಕ ವಿಷಯವಾಗಿದೆ. ಹಾಗೆಯೇ ಮಾದಪ್ಪನ ಗುಡಿಯ ಸುಕನಾಸಿ ಕಂಬದ ಮೇಲಿರುವ ಶಿಲಾಶಾಸನವು ಬೆಳಕವಾಡಿಯ ಹೊನ್ನಮಲಗಶೆಟ್ಟರ ಮಗ ಗುರುಬಶೆಟ್ಟಿ ಎಂಬಾತ ಕಲ್ಲುಗುಡಿಯ ಬಸದಿಯನ್ನು ಕಟ್ಟಿಸಿದ ಎಂದು ಉಲ್ಲೇಖವಿರುವುದೂ ಕೂಡ ಗಮನಾರ್ಹ ಸಂಗತಿಯಾಗಿದೆ. ಈ ಹಿಂದೆಯೇ ಈ ಪೀಠಿಕೆಯಲ್ಲಿ ಪ್ರಸ್ತಾಪಿಸಿದ ಹಾಗೆ ಮಲೆಮಾದೇಶ್ವರ ಕ್ಷೇತ್ರವು ಆ ಕಡೆ ತಮಿಳುನಾಡು ಈ ಕಡೆ ಕರ್ನಾಟಕದ ಸಂಪರ್ಕ ಹಾದಿಯಲ್ಲಿ ಕೊಂಡಿಯಂತೆ ಇದ್ದು, ಅದು ವಾಣಿಜ್ಯ ಹಾಗೂ ಸಾಮಾಜಿಕ ವಿನಿಮಯಗಳಿಗೆ ಮುಖ್ಯವಾದ ಅವಕಾಶವನ್ನು ಒದಗಿಸುತ್ತಿದೆ.ಈ ಹಿನ್ನೆಲೆಯಲ್ಲಿಯೇ ಒಳನಾಡಿನ ಕಿರುವಾಣಿಜ್ಯ ಮಾರ್ಗವೂ ಸಾಮಾಜಿಕ ಸಂಪರ್ಕದ ಹಾದಿಯೂ ಆಗಿರುವ ಈ ಭಾಗದಲ್ಲಿ ಉಪ್ಪಲಿಗಶೆಟ್ಟರ ಪ್ರಸ್ತಾಪ ಮತ್ತು ಅವರಿಂದ ಎಣ್ಣೆಮಜ್ಜನದ ಎಳ್ಳು ಪೂರೈಕೆ ಎಂಬುದು ಕುತೂಹಲಕಾರಿ ಊಹೆಗೆ ಕಾರಣವಾಗುತ್ತದೆ.

ಉಪ್ಪಲಿಗಶೆಟ್ಟರು ಬಹುಶಃ ತಮಿಳುನಾಡು ಮುಖಾಂತರ ಸಮುದ್ರದ ಉಪ್ಪು ತಂದುಕೊಂಡು ಅಥವಾ ಒಳನಾಡಿನಲ್ಲಿ ಸವಳುದಿಬ್ಬಗಳಿಂದ ಉಪ್ಪು ತಯಾರಿಸಿ, ಆ ಕಾಲದ ಅತ್ಯಂತ ಅವಶ್ಯಕ

ಸರಕಾಗಿದ್ದ ಉಪ್ಪು ಮಾರಾಟ ಮಾಡಿ ಅದಕ್ಕೆ ವಿನಿಮಯವಾಗಿ ಎಳ್ಳು ಪಡೆದಿರುವ ಸಾಧ್ಯತೆಗಳನ್ನು ಊಹಿಸಬಹುದು.ಯಾಕೆಂದರೆ ಕಥನದಲ್ಲೆಲ್ಲೂ ಸರಗೂರಯ್ಯ ಎಳ್ಳು ಬೆಳೆಯುವ ರೈತಾಪಿಯಮತೆ ಚಿತ್ರಣಗೊಂಡಿಲ್ಲದಿರುವುದು ಈ ಬಗೆಯ ಊಹೆಗೆ ಕಾರಣ ಒದಗಿಸುತ್ತದೆ. ಒಟ್ಟಾರೆಯಾಗಿ ಮಾದಪ್ಪನ ಪಂಥ ಅ ಪ್ರದೇಶದಲ್ಲಿ ಪ್ರಧಾನ ಕ್ರದ್ದುಪಂಥವಾಗಿ ರೂಪುಗೊಳ್ಳುವುದರ ಹಿಂದೆ ಈ ರೀತಿ ಒಳನಾಡಿನಲ್ಲಿ ವ್ಯಾಪಾರ ವಹಿವಾಟು ನಡೆಸಿ ಹಣ ಗಳಸಿದ್ದವರು ಒಕ್ಕಲಾಗಲೇಬೇಕಾದ ಅವಶ್ಯಕತೆಯನ್ನು ಒಂದು ಕಡೆ ಹಾಲು ಹೈನು ವಹಿವಾಟನಿಂದ ಶ್ರೀಮಂತನಾದ ಹಾಲುಮತದ ಜುಂಜೇಗೌಡನನ್ನು ಮತ್ತೊಂದು ಕಡೆ ಉಪ್ಪು ವ್ಯಾಪಾರ ವಿನಿಮಯದ ಉಪ್ಪಲಿಗಶೆಟ್ಟರ ರಾಮವ್ವೆ-ಮೂಗಪ್ಪರವರನ್ನು ಒಕ್ಕಲನ್ನಾಗಿಸಿಕೊಳ್ಳುವುದರ ಮೂಲಕ ಈಡೇರಿಸಿಕೊಂಡಿತು ಎನ್ನಬಹುದಾಗಿದೆ. ಈಗಲೂ ಕೂಡ ಮಾದೇಶ್ವರನ ಗುಡ್ಡರಲ್ಲಿ ಉಪ್ಪಲಿಗ ಜಾತಿಯ ಗುಡ್ಡರು ಸಾಕಷ್ಟು ಗಮನಾರ್ಹ ಸಂಖ್ಯೆಯಲ್ಲಿ ಇದ್ದಾರೆಂಬುದು ಕೂಡ ಈ ವಿಶ್ಲೇಷಣೆಗೆ ಒಂದು ಆಧಾರಾಂಶವಾಗಿದೆ.

ಮಲೆಮಾದೇಶ್ವರ ಪರಿಶೆಯಲ್ಲಿ ಎಣ್ಣೆಮಜ್ಜನ ಬಹಳ ಮುಖ್ಯವಾದ ಪ್ರಸಂಗ ಇದಕ್ಕೆ ಮೂಲಕೇಂದ್ರ ಬಿಂದು ಉಪ್ಪಾರರು.ಈಗಾಗಲೇ ಸಾಕಷ್ಟು ಕಡೆ ಎಣ್ಣೆಮಜ್ಜನದ ಬಗ್ಗೆ ಚರ್ಚಿಸಿರುವುದರಿಂದ ಅದರ ಬಗ್ಗೆ ಇಲ್ಲಿ ದೀರ್ಘವಾಗಿ ಚರ್ಚಿಸಿಲ್ಲ. ಹೀಗೆ ಉಪ್ಪಾರ ಜನಾಂಗದವರು ಮಾದೇಶ್ವರನ ಪರಂಪರೆಯಲ್ಲಿ ತಮ್ಮ ಸಹಭಾಗಿತ್ವವನ್ನು ಉಳಿಸಿಕೊಂಡು ಬರುತ್ತಿದ್ದಾರೆ.ಇವರಲ್ಲೂ ಕೂಡ ದೇವರ ಗುಡ್ಡರನ್ನು ಬಿಡುವ ಹಾಗೂ ಜಾತ್ರೆಯ ಸಂದರ್ಭದಲ್ಲಿ ಕಾಲ್ನಡಿಗೆಯಲ್ಲಿ ಬರುವ ಸಂಪ್ರದಾಯವನ್ನು ಉಳಿಸಿಕೊಂಡಿದ್ದಾರೆ. ಉಪ್ಪಲಿಗಶೆಟ್ಟರ ಗುಡ್ಡರು ಊರೂರಿಗೆ ಹೋಗಿ ಕಂಸಾಳೆ ಗೀತೆಗಳನ್ನು ಹಾಡುತ್ತಾರೆ ಹಾಗೂ ಪ್ರತೀ ತಿಂಗಳ ಅಮಾವಾಸ್ಯೆಗಳಂದು ತಪ್ಪದೇ ಬೆಟ್ಟಕ್ಕೆ ಹಾಜರಾಗಿ ಮಾದೇಶ್ವರನ ಗೀತೆಗಳನ್ನು ಹಾಡುತ್ತಾರೆ.ದಿನಕ್ಕೆ ಸುಮಾರು 1000 ರೂ.ಗಳಿಗೂ ಹೆಚ್ಚು ಭಿಕ್ಷೆ ಸಂಪಾದಿಸುತ್ತಾರೆ.ಎಂದು ಹೇಳುತ್ತಾರೆ.

**ತಮಿಳರು (ಕೊಂಗಾ)**

ದೇವರು ಒಬ್ಬನೆ. ಅಂತೆಯೇ ಎಲ್ಲ ಭಕ್ತರು ಒಂದೇ ಆದರೂ ನಂಬಿಕೆಯ ನೆಲೆಗಳು, ಪೂಜಿಸುವ ವಿಧಾನಗಳು ಭಿನ್ನ-ಭಿನ್ನವಾಗಿರುತ್ತದೆ. ಮಾದೇಶ್ವರ ಬೆಟ್ಟಕ್ಕೆ ಬರುವ ಭಕ್ತರು ಎರಡು ಭಿನ್ನ ಭಾಷಿಕ.ಅಂತೆಯೇ ಸಾಂಸ್ಕೃತಿಕ ನೆಲೆಗಳಿಂದ ಬರುತ್ತಾರೆ.ಒಬ್ಬರು ಕರ್ನಾಟಕದ ಭಕ್ತರಾದರೆ ಮತ್ತೊಬ್ಬರು ತಮಿಳುನಾಡಿನ ಭಕ್ತರು.ಮಾದೇಶ್ವರರ ಜನಪದ ಕಾವ್ಯವನ್ನು ನೋಡಿದಾಗ ಮಾದೇಶ್ವರರು ತಮಿಳು ಮಂದಿಯ ಭಕ್ತಿಯನ್ನು ಅವರ ಪೂಜಾ ವಿಧಾನವನ್ನು ಇಚ್ಚೆಪಟ್ಟಂತೆ ಕಾಣುವುದಿಲ್ಲ. ಕೊಂಗನಾಡು ಪರುಶೆ ಬಂದು ಕರವೆತ್ತಿ ಕೈಮುಗಿದು ನನ್ನ ಸೇವೆ ಮಾಡುತ್ತಿದ್ದಾರೆ.ಬೇವಿನ ಎಣ್ಣೆ ತಂದು ಬೆನ್ನಿಗೆ ತಿಕ್ಕಿದ್ದಾರೆ, ಹೊಂಗೆ ಎಣ್ಣೆಯ ತಂದ ನೆತ್ತಿಗೆ ಒತ್ತುತ್ತಿದ್ದಾರೆ.ಮರಾಳೆ ಎಣ್ಣೆ ತಂದು ದೀಪಕಸ್ಸಿ ಅರ್ಕವನ್ನ ಮಾಡಿ ಇಕ್ಕಿದ್ದಾರೆ.ಕಾಡ್ಸಾಳೆ ಕಾಯಿ ತಂದು ಎಡ ಬಡಿಸ್ತಿದ್ದಾರೆ.ಈ ಕೊಂಗ್ರು ಕೈನ ಪೂಜೆ ನನಗೆ ತರವಲ್ಲ. ಇದು ಜನಪದರ ಕಲ್ಪನೆಯೆಂಬುದರಲ್ಲಿ ಎರಡು ಮಾತಿಲ್ಲ. ಆದರೂ ಆತನ ತಮಿಳು ಮಂದಿಯ ಜೊತೆ

ಹೆಚ್ಚು ನಿಕಟತೆ ಹೊಂದಿದ್ದ ಸಂಗತಿಗಳು, ಉದಾಹರಣೆಗಳು ಸಿಗುವುದಿಲ್ಲ. ಆದರೆ ಮಾದೇಶ್ವರರಿಗೆ ಅಸಂಖ್ಯಾತ ತಮಿಳುಮಂದಿ ಭಕ್ತರಾಗಿದ್ದಾರೆ.ಈ ಪ್ರದೇಶವು ಹಿಂದಿನಿಂದಲೂ ಈ ಎರಡೂ ಅಂದರೆ ಕನ್ನಡ ಮತ್ತು ತಮಿಳು ಸಂಸ್ಕೃತಿಯ ಸಂಗಮಕ್ಕೆ ನೆಲೆಯಾಗಿದೆ.ಬ್ರಿಟಿಷರ ಕಾಲದಲ್ಲಿ ಇಡೀ ಪ್ರದೇಶ ಮದ್ರಾಸ್ ಗೌರ್ನಮೆಂಟ್ ಆಡಳಿತಕ್ಕೆ ಒಳಪಟ್ಟಿತ್ತು.ಹೀಗೆ ಅನೇಕ ಕಾರಣಗಳಿಂದ ತಮಿಳುನಾಡಿನ ಅನೇಕ ಮಂದಿ ಇಲ್ಲಿಗೆ ಭಕ್ತರಾಗಿದ್ದಾರೆ.

ಯುಗಾದಿ ಪರಿಶೆಗೆ ತಮಿಳುನಾಡು ಪ್ರದೇಶಕ್ಕೆ ಸೇರಿದ ಜನರು ಪ್ರಧಾನವಾಗಿ ಬರುತ್ತಾರೆ.ಕೃಷಿ ಚಟುವಟಿಕೆಗಳು ಇದಕ್ಕೆ ಮುಖ್ಯಕಾರಣವಾಗಿರುತ್ತದೆ.ಆಂಧ್ರ ಮತ್ತು ಕರ್ನಾಟಕದಲ್ಲಿ ಯುಗಾದಿಯನ್ನು ಹೊಸವರ್ಷವೆಂದು ಆಚರಿಸುವುದರಿಂದ ಆಂಧ್ರ, ಕರ್ನಾಟಕದ ಜನ ಯುಗಾದಿ ಪರಿಶೆಗೆ ಹೋಗುವುದು ವಿರಳ.ಆದರೆ ಸಂಕ್ರಾಂತಿ ಮತ್ತು ಶಿವರಾತ್ರಿ ಪರಿಶೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ.ತಮಿಳುನಾಡಿನ ಭಕ್ತರಿಗೂ, ಕರ್ನಾಟಕದ ಭಕ್ತರಿಗೂ ಅನೇಕ ವ್ಯತ್ಯಾಸಗಳಿವೆ. ಕರ್ನಾಟಕದ ಭಕ್ತರು ಬದಲಾದ ಧಾರ್ಮಿಕ ವ್ಯವಸ್ಥೆಗೆ ಒಗ್ಗಿಕೊಂಡಿದ್ದಾರೆ. ಆದರೆ ತಮಿಳುನಾಡಿನ ಭಕ್ತರು ತಮ್ಮ ಹಳೆಯ ಅಂದರೆ ಹಿಂದಿನ ನಂಬಿಕೆ, ಆಚರಣೆ ವಿಚಾರಗಳನ್ನು ಬಿಟ್ಟುಕೊಟ್ಟಿಲ್ಲ. ಪರಿಶೆಗೆ ಬರುವ ಹೆಚ್ಚು ಮಂದಿ ತಾವೇ ಸ್ವತಂತ್ರವಾಗಿ ಕಾಯಿ ಒಡೆದು ಸ್ವಯಂ ಪೂಜೆ ಮಾಡುತ್ತಾರೆ.ಅರ್ಚಕರಿಗಾಗಲೀ, ಕಾಯಿ ಒಡೆಯುವವರಿಗಾಗಲೀ ಕಾಯುವುದಿಲ್ಲ. ಕೆಲವರು ಕಾಯಿ ಒಡೆಯಲು ದುಡ್ಡು ಕೊಡಬೇಕಾಗುತ್ತದೆಂದು ಎಂದೂ ಕೆಲವುರು ಹೀಗೆ ಮಾಡುತ್ತಾರೆ.ಆದರೆ ಸಾಂಸ್ಕೃತಿಕವಾಗಿ ಆಲೋಚಿಸಿದಾಗ ಅದು ಸುಲಭವಾಗಿ ಹೇಳಬಹುದಾದ ವಿಷಯವಲ್ಲ. ಸ್ವಯಂ ಪೂಜಿಸಿ ನೆಮ್ಮದಿ ಕಾಣುವ ಪರಿಯನ್ನು ನಾವು ಅಲ್ಲಿ ಕಾಣಬಹುದು.ಅಷ್ಟೇ ಅಲ್ಲ ಇವರಲ್ಲಿ ಆಡಂಬರಕ್ಕಿಂತ ಭಕ್ತಿಗೆ ಹೆಚ್ಚು ಪ್ರಾಧಾನ್ಯತೆ ಇರುವುದನ್ನು ತಮಿಳರಲ್ಲಿ ಗುರುತಿಸಬಹುದು.

ಗುಂಪು ಗುಂಪಾಗಿ ಬರುವ ಇವರು ದೇವಾಲಯದ ಹೊರಗೆ ದಕ್ಷಿಣ ಆವರಣದಲ್ಲಿ ಗೋಪುರದ ಮುಂದೆ ಕಾಯಿ ಒಡೆದು ತಾವೇ ಸ್ವತಃ ಪೂಜಿಸಿ ಭಕ್ತಿ ಸಲ್ಲಿಸುತ್ತಾರೆ.ನಂತರ ದೇವರ ದರ್ಶನ ಪಡೆಯುತ್ತಾರೆ. ನಂತರ ಹತ್ತಾರು ಮಂದಿ ಒಂದೇ ಕಡೆ ಸೇರಿ ತಾವು ತಂದ ಬುತ್ತಿಗಳನ್ನು ಬಿಚ್ಚಿ ಒಗ್ಗೂಡಿಸಿ ಮತ್ತೆ ಹಂಚಿಕೊಂಡು ತಿನ್ನುತ್ತಾರೆ. ಒಂದು ಪಂಚೆಯನ್ನು ಹರಡಿ ಅದರ ಮೇಲೆ ಬಾಳೆ ಎಲೆಗಳನ್ನು ಇಟ್ಟು ಬುತ್ತಿಯನ್ನೆಲ್ಲ ಹಾಕುತ್ತಾರೆ.ನಂತರ ಒಟ್ಟಾಗಿ ಕುಳಿತು ಒಂದೇ ಎಲೆಯಲ್ಲಿ ಸಾಮೂಹಿಕ ಭೋಜನ ಮಾಡುತ್ತಾರೆ.ಜೊತೆಗೆ ಮಾದೇಶ್ವರರಿಗಿಂತ ಆಲಂಬಾಡಿ ಬಸವನಿಗೆ ಇವರ ಭಕ್ತಿ ಹೆಚ್ಚು. ಹೈನುಗಾರಿಕೆಯನ್ನೇ ಮೂಲ ಉದ್ಯೋಗವನ್ನಾಗಿ ಮಾಡಿಕೊಂಡಿರುವ ಈ ಪ್ರದೇಶ ಅನೇಕ ಮಂದಿ ಮಾದೇಶ್ವರನಿಗಿಂತ ಬಸವನನ್ನು ನಂಬುತ್ತಾರೆ. ಆದ್ದರಿಂದ ಅಲ್ಲಿಗೆ ಹೇರಳವಾಗಿ ಬೆಣ್ಣೆ–ಮೊಸರು, ಹಾಲು, ತುಪ್ಪ ತಂದು ಸುರಿಯುತ್ತಾರೆ.ದುಡ್ಡು ತಂದು ಬಸವನಿಗೆ ಅಂಟಿಸಿ ತಮ್ಮ ಹರಕೆ ಸಲ್ಲಿಸುತ್ತಾರೆ. ಅನೇಕ ಮಂದಿ ಭಕ್ತರು ತಮ್ಮ ಮನೆಯಲ್ಲಿ ಹುಟ್ಟಿದ ಮೊದಲ ಕರುವನ್ನು ತಂದು ಇಲ್ಲಿಗೆ ಒಪ್ಪಿಸುತ್ತಾರೆ.

ಕುರಿ, ಕೋಳಿ ಕೊಡುವವರಿದ್ದಾರೆ. ಆದರೆ ಇಲ್ಲಿ ಪ್ರಾಣಿಬಲಿ ಇಲ್ಲ. ಆದ್ದರಿಂದ ಅವನ್ನು ದೇವಸ್ಥಾನಕ್ಕೆ ಕೊಡುತ್ತಾರೆ.ಅವರು ಅವುಗಳನ್ನು ಮಾರಿ ಹಣವನ್ನು ದೇವಸ್ಥಾನದ ಅಭಿವೃದ್ಧಿಗೆ ಬಳಸುತ್ತಾರೆ.

ಮಾದೇಶ್ವರ ಸಾಂಸ್ಕೃತಿಕ ಪರಂಪರೆಯಲ್ಲಿ ಇವರ ಸಹಭಾಗಿತ್ವವನ್ನು ನಾವು ಗಮನಿಸಬೇಕಾಗುತ್ತದೆ, ಕಾರಣ ಬೇರೊಂದು ಭಾಷೆಯ, ಬೇರೆ ಭೌತಿಕ ಪರಿಸರದಿಂದ ಬಂದುದರಿಂದ ವಿಶೇಷವಾಗಿ ಕಾಣುತ್ತಾರೆ.ಮಲೆ ಮಾದಪ್ಪನ ದರ್ಶನಕ್ಕೆ ತಮಿಳುನಾಡಿನಿಂದ ಮುಖ್ಯವಾಗಿ ಈ ಕೆಳಕಂಡ ಜಾತಿಯ ಜನರು ಬರುತ್ತಾರೆ.ಪರಿಶಿಷ್ಟ ಜಾತಿಯಲ್ಲಿ ಆದಿ ದ್ರಾವಿಡರು ಮತ್ತು ಕೊರವರು, ಹಿಂದುಳಿದ ಜಾತಿಗಳಲ್ಲಿ ಗೌಂಡರ್, ಮೊದಲಿಯಾರ್, ಮುತ್ತಲಿಯರ್. ಪರಿಶಿಷ್ಟ ಪಂಗಡದಲ್ಲಿ ಮಳವಾರ್ ಜಾತಿಯವರು, ಕೊನೆಯದಾಗಿ ಲಿಂಗಾಯಿತರೂ ಕೂಡ ಪ್ರಮುಖವಾಗಿ ಬರುತ್ತಾರೆಂದು ವಕ್ತೃಗಳು ಹೇಳುತ್ತಾರೆ

ಒಟ್ಟಾರೆಯಾಗಿ ಜಾತ್ರೆಗಳು ಕರ್ನಾಟಕದಲ್ಲಿ ಮಾತ್ರವಲ್ಲ, ಭಾರತದ್ಯಾಂತ ಜರುಗುತ್ತವೆ. ಪ್ರತಿಯೊಂದು ಜಾತ್ರೆಗಳಲ್ಲಿ ಆಯಾ ಗ್ರಾಮದವರು ಸಾಂಘಿಕಿಕ ಮನೋಭಾವನೆಯಿಂದ ಬಹುಸಂಸ್ಕೃತಿ ಜನಪದರು ಜಾತ್ರೆಗಳಲ್ಲಿ ಸಹಭಾಗಿಗಳಾಗಿ ಭಾಗವಹಿಸುವುದನ್ನು ಕಾಣಬಹುದು. "ಜಾತ್ರೆ ಎಂಬುದೇ ಜನ. ಜನರಿದ್ದರೆ ಜಾತ್ರೆ, ಜಾತ್ರೆಯಿಂದ ಜನವಲ್ಲ. ಆದುದರಿಂದ ಬಹುಸಂಸ್ಕೃತಿ ಜನಪದರು ಸಹಭಾಗಿತ್ವದಿಂದ ಕೂಡಿಕೊಂಡು ಸಮಾಜದ ಒಳಿತಿಗಾಗಿ ಆಚರಿಸುವುದೇ ಜಾತ್ರೆ ಎಂಬ ತಿರುಳನ್ನು ಅರಿಯಬೇಕು. ಈ ಅಂಶದಿಂದ  ಸಮಾಜದಲ್ಲಿ ಶಾಂತಿ, ಐಕ್ಯತೆ, ಸ್ನೇಹ ಸೌಹಾರ್ದತೆ ನೆಲೆಸುತ್ತದೆ" ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿ ಹೇಳುವುದಾದರೆ ನಮ್ಮ ಸಮಾಜದ ಸಾಮಾಜಿಕ ಸ್ಥಿತ್ಯಂತರಗಳು ಹಾಗೂ ಬದಲಾದ ಬದುಕಿನ ಮೌಲ್ಯಗಳು ಇಂದು ಜಾತ್ರೆ ಸ್ವರೂಪದಲ್ಲಿ ಮೇಲಿಂದ ಮೇಲೆ ಆಗುತ್ತಿರುವ ಬದಲಾವಣೆಗಳನ್ನು ಆಗುತ್ತಿವೆ. ಒಟ್ಟಾರೆ ಮಾದೇಶ್ವರ ಪರಂಪರೆಯ ಪರಿಶೆಗಳು ವಿವಿಧ ಸಮುದಾಯಗಳ ಸಹಭಾಗಿತ್ವ ಕಾರಣದಿಂದಾಗಿಯೇ ಇಂದಿಗೂ ವಿಶೇಷವಾಗಿ ಉಳಿದು ಬಂದಿದೆ.

**ಪರಾಮರ್ಶನ ಗ್ರಂಥಗಳು**


1. ಅರವಿಂದ ಮಾಲಗತ್ತಿ – ಮಲೆಯ ಮಾದೇಶ್ವರ, ಪ್ರಸಾರಂಗ ಮೈ.ವಿ.ವಿ. ಮೈಸೂರು
2. ನಾಗೇಶ.ಕೆ.ಹೆಬ್ಬಾಲೆ–ಬಹು ಸಂಸ್ಕೃತಿ ಮತ್ತು ದೇಸಿಜಾತ್ರೆಗಳ ಮಹಾಸಮನ್ವಯ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–2011
3. ರಾಜಶೇಖರ.ಪಿ.ಕೆ – ಮಲೆಯ ಮಾದೇಶ್ವರ ಸಂಪುಟ –1 ಮತ್ತು 2, ಕನ್ನಡ ಸಂಸ್ಕೃತಿ ಇಲಾಖೆ ಬೆಂಗಳೂರು–2006
4. ವೆಂಕಟೇಶ ಇಂದ್ವಾಡಿ – ಮಲೆಯ ಮಾದಪ್ಪನ ಮಹಾಕಾವ್ಯ ಸಾಂಸ್ಕೃತಿಕ ಮುಖಾಮುಖಿ ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ– 2008
5. ಹಂಪ.ನಾಗರಾಜಯ್ಯ, ಕರ್ನಾಟಕದ ಜಾತ್ರೆಗಳು, ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು.